ರಾಜ್ಯದ ವಿವಿಧ ಜೈಲಿನಲ್ಲಿರುವ ಖೈದಿಗಳು

698 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಜೈಲಿನಲ್ಲಿರುವ ಖೈದಿಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಸಂಖ್ಯೆ ವಿವರ ಒದಗಿಸುವುದು)

ಆ) ರಾಜ್ಯದಲ್ಲಿ ಹೊಸ ಜೈಲನ್ನು ನಿರ್ಮಿಸುವ ಯೋಜನೆ ಇದೆಯೇ? ಹಾಗಿದ್ದಲ್ಲಿ ಯಾವ ಜಿಲ್ಲೆಯಲ್ಲಿ ಮತ್ತು ಯಾವ ತಾಲ್ಲೂಕಿನಲ್ಲಿ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) 7065.

ಜಿಲ್ಲಾವಾರು ವಿವರ

	ಜಿಲ್ಲೆ	ಪುರುಷರು	ಮಹಿಳೆಯರು	ಒಟ್ಟು
1.	ಬೆಂಗಳೂರು	2056	46	2102
2.	ಬೆಳಗಾವಿ	595	12	606
3.	ಬಳ್ಳಾರಿ	399	08	407
4.	ಬಿಜಾಪುರ	315	06	321
5.	ಗುಲ್ಬರ್ಗಾ	458	12	470
6.	ಮೈಸೂರು	828	52	880
7.	ಬೀದರ್	074	01	075
8.	ಕಾರವಾರ	070	03	073
9.	ಮಡಕೇರಿ	103	-	103
10.	ಮಂಗಳೂರು	175	14	189
11.	ರಾಯಚೂರು	164	01	165
12.	ಶಿವಮೊಗ್ಗ	333	08	341
13.	ಧಾರವಾಡ	269	15	284
14.	ಚಿಕ್ಕಮಗಳೂರು	218	07	225

15.	ಚಿತ್ರದುರ್ಗ	228	02	230
16.	ಹಾಸನ	153	09	162
17.	ಕೋಲಾರ	192	-	192
18.	ಮಂಡ್ಯ	144	01	145
19.	ತುಮಕೂರು	090	05	095
	ಒಟ್ಟು	**6863**	**202**	**7065**

ಆ) ಹೌದು.

ಹೊಸ ಜೈಲುಗಳನ್ನು ನಿರ್ಮಿಸುವ ಕುರಿತು ಸರ್ಕಾರ ಈ ರೀತಿ ಯೋಜನೆಗಳನ್ನು ಹಾಕಿಕೊಂಡಿದೆ:

1) ಶಿಥಿಲವಾದಂತಹ ಹಾಗೂ ಹೆಚ್ಚು ದಟ್ಟಣೆಯಿರುವ ಜೈಲುಗಳ ಬದಲಿಗೆ ಹೊಸ ಮಾದರಿಯ ಹೆಚ್ಚು ಸ್ಥಳಾವಕಾಶವಿರುವ ಜೈಲುಗಳನ್ನು ಕಟ್ಟುವುದು.

2) ಶಿಥಿಲವಾದಂತಹ ಉಪ ಕಾರಾಗೃಹಗಳ ಬದಲಿಗೆ ಹೊಸ ಕಟ್ಟಡಗಳನ್ನು ಕಟ್ಟುವುದು, ಹಾಗೂ

3) ಎಲ್ಲೆಲ್ಲಿ ಮುನ್ಸಿಫ್ ನ್ಯಾಯಾಲಯಗಳಿದ್ದು, ಕಾರಾಗೃಹಗಳು ಇಲ್ಲವೋ ಅಂತಹ ಸ್ಥಳಗಳಲ್ಲಿ ಜೈಲುಗಳನ್ನು ನಿರ್ಮಿಸುವುದು.

ಈ ಯೋಜನೆಯನ್ವಯ ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿ ಕೇಂದ್ರ ಕಾರಾಗೃಹವನ್ನು ನಿರ್ಮಿಸಲಾಗುತ್ತಿದೆ ಹಾಗೂ ಈ ಕೆಳಕಂಡ ಸ್ಥಳಗಳಲ್ಲಿ ಶಿಥಿಲಗೊಂಡ ಹಳೆಯ ಉಪ ಕಾರಾಗೃಹಗಳು ಬದಲಿಗೆ ಹೊಸ ಉಪ ಕಾರಾಗೃಹಗಳನ್ನು ಕಟ್ಟಲಾಗುತ್ತಿದೆ.

1. ಚಿಕ್ಕಮಗಳೂರಿನಲ್ಲಿ ಜಿಲ್ಲಾ ಉಪ ಕಾರಾಗೃಹ. 2. ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ಉಪ ಕಾರಾಗೃಹ. 3. ಮೈಸೂರು ಜಿಲ್ಲೆಯ ನಂಜಗೂಡಿನಲ್ಲಿ ಉಪ ಕಾರಾಗೃಹ. 4. ಗುಲ್ಬರ್ಗಾ ಜಿಲ್ಲೆ ಆಳಂದದಲ್ಲಿ ಉಪ ಕಾರಾಗೃಹ.

ರಾಜ್ಯದ 42 ತಾಲ್ಲೂಕುಗಳಲ್ಲಿ ಮುನ್ಸಿಫ್ ನ್ಯಾಯಾಲಯಗಳಿದ್ದು, ಅಲ್ಲಿ ಕಾರಾಗೃಹಗಳ ವ್ಯವಸ್ಥೆ ಇಲ್ಲ. ಈ ತಾಲ್ಲೂಕುಗಳಲ್ಲಿ ಹಣಕಾಸಿನ ಲಭ್ಯತೆ ಹಾಗೂ ನಿಮೇಶನ ಲಭ್ಯತೆ ಇವುಗಳನ್ನು ಅನುಸರಿಸಿ ಕಾರಾಗೃಹಗಳನ್ನು ಕ್ರಮೇಣ ನಿರ್ಮಿಸಲಾಗುವುದು.

ಕುಂದಾಪುರ ತಾಲ್ಲೂಕಿನಲ್ಲಿ ಸಮುದ್ರ ಕೊರತೆ

699 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?